# APRIL 07, 2026

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ಬಾಗಲಕೋಟೆ ಹಾಗೂ ದಾವಣಗೆರೆ** ಉಪಚುನಾವಣೆ; ಜಿಲ್ಲಾಡಳಿತಗಳಿಂದ ಸ್ವೀಪ್ ಅಭಿಯಾನ.

**ದೇಶದಲ್ಲಿ 70 ದಿನಗಳಿಗೆ ಸಾಕಾಗುವ**  ಷ್ಟು, ಕಚ್ಚಾ ತೈಲದ ಸಂಗ್ರಹವಿದೆ –  ಕೇಂದ್ರ ಸಚಿವ, ಪ್ರಲ್ಹಾದ ಜೋಶಿ, ಮಾಹಿತಿ.

**ಪೆಟ್ರೋಕೆಮಿಕಲ್ ಉತ್ಪನ್ನಗಳು;** ಜೂನ್ 30ರ ವರೆಗೆ, ಕಸ್ಟಮ್ಸ್ ಸುಂಕದ ಪೂರ್ಣ ವಿನಾಯಿತಿಗೆ, ಕೇಂದ್ರ ನಿರ್ಧಾರ.

**'ಆರೋಗ್ಯಕ್ಕಾಗಿ ಜೊತೆಗೂಡಿ,** ವಿಜ್ಞಾನದ ಜೊತೆ ನಿಲ್ಲಿ', ಧ್ಯೇಯದೊಂದಿಗೆ, ಇಂದು, ವಿಶ್ವ ಆರೋಗ್ಯ ದಿನಾಚರಣೆ.

<><><>

**ಈಗ ವಾರ್ತೆಗಳ ವಿವರ**

<><><>

**ಬಾಗಲಕೋಟೆ ಹಾಗೂ ದಾವಣಗೆರೆ** ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆ ಬಹಿರಂಗ ಪ್ರಚಾರ ಇಂದು ಸಂಜೆ ಅಂತ್ಯಗೊಳ್ಳಲಿದೆ. ನಾಡಿದ್ದು ಮತದಾನ ನಡೆಯಲಿದ್ದು, 322 ಮತಗಟ್ಟೆಗಳನ್ನು

ಬಾಗಲಕೋಟೆ ಜಿಲ್ಲಾಡಳಿತ, ಸ್ಥಾಪಿಸಿದೆ. ಒಟ್ಟು 2 ಲಕ್ಷ 59 ಸಾವಿರದ 797 ಅರ್ಹ ಮತದಾರರಿದ್ದಾರೆ. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಹಿನ್ನೆಲೆ, ಜಿಲ್ಲಾ ಪಂಚಾಯಿತಿ ಸಿ.ಇ.ಓ, ಗಿತ್ತೆ ಮಾಧವ ವಿಠ್ಠಲರಾವ್, ಜಿಲ್ಲಾ ಸ್ವೀಪ್ ಸಮಿತಿ ಆಯೋಜಿಸಿದ್ದ, ವಾಕಥಾನ್ ಗೆ ದೇವರಾಜ ಅರಸು ಬಡಾವಣೆಯಲ್ಲಿ ಚಾಲನೆ ನೀಡಿ, ಎಲ್ಲ ಅರ್ಹ ಮತದಾರರೂ ಮತ ಚಲಾಯಿಸುವಂತೆ, ಮನವಿ ಮಾಡಿದರು.

<><><>

**ದೇಶದಲ್ಲಿ ಸುಮಾರು 70 ದಿನಗಳಿಗೆ ಸಾಕಾಗುವ** ಷ್ಟು ಕಚ್ಚಾ ತೈಲದ ಸಂಗ್ರಹವಿದೆ. ನಿರಂತರವಾಗಿ ತೈಲ ಪೂರೈಕೆ ಆಗುತ್ತಿದ್ದು, ಜನರು ಆತಂಕ ಪಡುವ ಅಗತ್ಯವಿಲ್ಲ ಎಂದು, ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ಸ್ಪಷ್ಟ ಪಡಿಸಿದ್ದಾರೆ. ದಾವಣಗೆರೆಯಲ್ಲಿ ಮಾತನಾಡಿದ ಅವರು, ಜಾಗತಿಕವಾಗಿ, ಆಟೊ ಎಲ್.ಪಿ.ಜಿ. ಸಂಪನ್ಮೂಲಗಳು ಸೀಮಿತವಾಗಿವೆ. ಸದ್ಯದ ಮಟ್ಟಿಗೆ, ಆಟೊ ಚಾಲಕರು, ಎಲ್.ಪಿ.ಜಿ. ಬದಲಿಗೆ, ಪೆಟ್ರೋಲ್ ಬಳಸುವುದು ಸೂಕ್ತ ಎಂದರು. ವಾಣಿಜ್ಯ ಬಳಕೆ ಎಲ್.ಪಿ.ಜಿ. ಸಿಲಿಂಡರ್‌ಗಳ ವಿತರಣೆಯನ್ನು ಶೇಕಡ 70ಕ್ಕೆ ಹೆಚ್ಚಿಸಲಾಗಿದೆ. ಖಾಸಗಿ ಕಂಪೆನಿಗಳು ಪ್ರತಿ ಕಿಲೋ ಎಲ್.ಪಿ.ಜಿ. ದರವನ್ನು 110 ರೂಪಾಯಿಗೆ ಏರಿಸಿವೆ. ಸರ್ಕಾರಿ ಒಡೆತನದ ಕೇಂದ್ರಗಳಲ್ಲಿ, ಈ ದರ ಪ್ರತಿ ಕಿಲೋಕ್ಕೆ, 89 ರೂಪಾಯಿ ಇದೆ ಎಂದು, ಸಚಿವ ಜೋಶಿ ತಿಳಿಸಿದರು.

<><><>

**ಕೊಲ್ಲಿ ಹಾಗೂ ಮಧ್ಯ ಪ್ರಾಚ್ಯ ರಾಷ್ಟ್ರಗಳ ಮಧ್ಯದ,** ಸಂಘರ್ಷದ ಹಿನ್ನೆಲೆ, ಜೂನ್ 30ರ ವರೆಗೆ, ಪೆಟ್ರೋಕೆಮಿಕಲ್ ಉತ್ಪನ್ನಗಳ ಮೇಲೆ, ಕಸ್ಟಮ್ಸ್ ಸುಂಕದ ಪೂರ್ಣ ವಿನಾಯಿತಿಗೆ, ಕೇಂದ್ರ ಸರ್ಕಾರ ನಿರ್ಧರಿಸಿದೆ. ಪೆಟ್ರೋಕೆಮಿಕಲ್ಸ್, ದೇಶೀಯ ಉದ್ಯಮಕ್ಕೆ ನಿರ್ಣಾಯಕವಾಗಿದ್ದು, ಪೆಟ್ರೋಕೆಮಿಕಲ್ಸ್ ವಿವಿಧ ಶ್ರೇಣಿಯ ಉತ್ಪನ್ನಗಳ, ಒಳಹರಿವಿನ ನಿರಂತರ ಲಭ್ಯತೆ ಖಾತ್ರಿಪಡಿಸಲು, ಹಾಗೂ ದೇಶದಲ್ಲಿ ಪೂರೈಕೆ ವ್ಯವಸ್ಥೆ ನಿರ್ವಹಣೆಯಲ್ಲಿ, ಸ್ಥಿರತೆ ಕಾಪಾಡಲು, ತಾತ್ಕಾಲಿಕ ಪರಿಹಾರವಾಗಿ, ಕೇಂದ್ರ ಸರ್ಕಾರ ಈ ನಿರ್ಧಾರ ಕೈಗೊಂಡಿದೆ.

<><><>

**ಮಳೆ ಆಶ್ರಿತ ಬೆಳೆಗಳಿಗೆ ಹೆಸರಾಗಿದ್ದ,** ಕಲ್ಯಾಣ ಕರ್ನಾಟಕದ ಯಾದಗಿರಿ ಜಿಲ್ಲೆ, ನಾರಾಯಣಪುರ ಜಲಾಶಯದ ಕಾಲುವೆ ನೀರು ಬಳಸಿಕೊಂಡು, ಇಲ್ಲಿನ ಬಹುಪಾಲು ರೈತರು, ಈಗ ಕಲ್ಲಂಗಡಿ ಹಾಗೂ

ಬ್ಯಾಡಗಿ ಮೆಣಸಿನಕಾಯಿ ಬೆಳೆಯುತ್ತಿದ್ದಾರೆ. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಹಾಗೂ ಪ್ರಧಾನಮಂತ್ರಿ ಕೃಷಿ ಸಿಚಾಯಿ ಯೋಜನೆಗಳ ಅಡಿ, ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದ, ತಾಂತ್ರಿಕ ಸಹಾಯದೊಂದಿಗೆ, ಗಣನೀಯ ಪ್ರಮಾಣದ ಕೃಷಿ ಕ್ಷೇತ್ರದಲ್ಲಿ, ಹನಿ, ತುಂತುರು ಹಾಗೂ ಸೂಕ್ಷ್ಮ ನೀರಾವರಿ ಪದ್ಧತಿ ಅಳವಡಿಸಿಕೊಂಡು, ನೀರಾವರಿ ಕೃಷಿ ಕೈಗೊಂಡಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಹೆಚ್ಚಿನ ಮಾಹಿತಿ ನೀಡಿದ್ದಾರೆ, ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದ, ವಿಸ್ತರಣಾ ನಿರ್ದೇಶಕ ವೆಂಕಟೇಶಲು.

<><><>

**ವೆಂಕಟೇಶಲು ಧ್ವನಿ– 46 ಸೆಕೆಂದುಗಳು**

<><><>

**ಪ್ರಸಕ್ತ ಮುಂಗಾರು ಹಂಗಾಮಿಗೆ,** ರಸಗೊಬ್ಬರ ಖರೀದಿಸಲು, ರೈತರು ಫ್ರುಟ್ಸ್ ತಂತ್ರಾಂಶದಲ್ಲಿ ತಮ್ಮ ಐ.ಡಿ. ಹೊಂದಿರುವುದು ಕಡ್ಡಾಯ ಎಂದು, ಕೃಷಿ ಇಲಾಖೆ ಗದಗ ಜಿಲ್ಲೆ ಜಂಟಿ ನಿರ್ದೇಶಕಿ, ಚೇತನಾ ಪಾಟೀಲ ತಿಳಿಸಿದ್ದಾರೆ. ರೈತರ ಭೂಮಿ ಹಾಗೂ ಬೆಳೆಯ ಆಧಾರದಲ್ಲಿ, ಅಗತ್ಯ ಪ್ರಮಾಣದ ರಸಗೊಬ್ಬರಗಳನ್ನು, ಕೆ–ಕಿಸಾನ್ ತಂತ್ರಾಂಶದ ಮೂಲಕ ವಿತರಣೆ ಮಾಡಲಾಗುತ್ತದೆ. ಹೊಸದಾಗಿ FID ಪಡೆಯಲು, ಸಮೀಪದ ರೈತ ಸಂಪರ್ಕ ಕೇಂದ್ರ, ಸಾಮಾನ್ಯ ಸೇವಾ ಕೇಂದ್ರ ಮತ್ತು ಗ್ರಾಮ ಒನ್ ಕೇಂದ್ರಗಳಿಗೆ ಭೇಟಿ ನೀಡುವಂತೆ, ಅವರು ಕೋರಿದ್ದಾರೆ.

<><><>

**ಕೃಷಿ ಇಲಾಖೆ,** ಶಿವಮೊಗ್ಗ ವಿಭಾಗದ ಜಂಟಿ ನಿರ್ದೇಶಕ, ಕಿರಣಕುಮಾರ, ಮಾಹಿತಿ ನೀಡಿ, ಪ್ರಸಕ್ತ ಮುಂಗಾರು ಹಂಗಾಮಿನಿಂದ, ಹೊಸ ನಿಯಮ ಜಾರಿಗೊಳ್ಳಲಿದ್ದು, ರಸಗೊಬ್ಬರ ವಿತರಣೆಯಲ್ಲಿ ಪಾರದರ್ಶಕತೆ ಹಾಗೂ ಕಾಳಸಂತೆಯಲ್ಲಿ ಗೊಬ್ಬರ ಮಾರಾಟ ತಡೆಯಲು, ರೈತರು ಫ್ರುಟ್ಸ್ ಐ.ಡಿ. ಹೊಂದಿರುವುದು ಕಡ್ಡಾಯ, ಎಂದರು.

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(40 ಸೆಕೆಂದುಗಳು)**

<><><>

## ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

**‘ಆರೋಗ್ಯಕ್ಕಾಗಿ ಜೊತೆಗೂಡಿ,** ವಿಜ್ಞಾನದ ಜೊತೆ ನಿಲ್ಲಿ’, ಎಂಬ ಧ್ಯೇಯದೊಂದಿಗೆ, ಇಂದು, ವಿಶ್ವ ಆರೋಗ್ಯ ದಿನಾಚರಣೆ. 1948, ಏಪ್ರಿಲ್ 7 ರಂದು ವಿಶ್ವ ಆರೋಗ್ಯ ಸಂಸ್ಥೆ, ಡಬ್ಲ್ಯು.ಹೆಚ್.ಓ ಸ್ಥಾಪನೆಗೊಂಡ ದಿನದ ಸ್ಮರಣಾರ್ಥ, ವಿಶ್ವ ಆರೋಗ್ಯ ದಿನವನ್ನು, ಇಂದು ವಿಶ್ವಾದ್ಯಂತ, ಆಚರಿಸಲಾಗುತ್ತದೆ. ನಾಗರಿಕ ಆರೋಗ್ಯ ಸೇವೆಗಳ ಸಕಾಲಿಕ ಲಭ್ಯತೆ ಹಾಗೂ ಗುಣಮಟ್ಟ ಖಾತ್ರಿ ಪಡಿಸಲು, ಈ ದಿನ ಮೀಸಲಾಗಿದೆ.

<><><>

**ವಿಶ್ವ ಆರೋಗ್ಯ ದಿನದ ಹಿನ್ನೆಲೆ,** ಖ್ಯಾತ ಮನೋ ಆರೋಗ್ಯ ತಜ್ಞ, ಬೆಂಗಳೂರಿನ, ಪದ್ಮಶ್ರೀ ಪುರಸ್ಕೃತ, ಡಾಕ್ಟರ್ ಸಿ.ಆರ್. ಚಂದ್ರಶೇಖರ, ಕಲಬುರಗಿ ಜಿಲ್ಲೆ, ಅಫಜಲಪುರದ, ಸರ್ಕಾರಿ ಪಾಲಿಟಕ್ನಿಕ್ ವಿದ್ಯಾರ್ಥಿಗಳಿಗೆ, ಇಂದು ಬೆಳಗ್ಗೆ 11 ಗಂಟೆಗೆ, ‘ವಿದ್ಯಾರ್ಥಿಗಳ ಮನೋ ಆರೋಗ್ಯ’ ಕುರಿತು, ಆನ್‌ಲೈನ್ ಮೂಲಕ, ವಿಶೇಷ ಉಪನ್ಯಾಸ ನೀಡಲಿದ್ದಾರೆ.

<><><>

**ನೈಋತ್ಯ ರೇಲ್ವೆ, ಬೇಸಿಗೆ ರಜೆ ಹಿನ್ನೆಲೆ,** ಪ್ರಯಾಣಿಕರ ಹೆಚ್ಚಿನ ದಟ್ಟಣೆಯನ್ನು ನಿಯಂತ್ರಿಸಲು, ಪ್ರತಿ ಸೋಮವಾರ, ಶ್ರೀ ಸಿದ್ಧಾರೂಢಸ್ವಾಮೀಜಿ ಹುಬ್ಬಳ್ಳಿ ರೈಲು ನಿಲ್ದಾಣದಿಂದ ಹೊರಡುವ, ಗಾಜಿಪುರ ಸಿಟಿ ವೀಕ್ಲಿ ಎಕ್ಸ್‌ಪ್ರೆಸ್ ವಿಶೇ ’ ರೈಲಿನ ಸೇವೆಯನ್ನು, ಈ ತಿಂಗಳ 27ರ ವರೆಗೆ ವಿಸ್ತರಿಸಿದೆ. ಪ್ರತಿ ಗುರುವಾರ, ಗಾಜಿಪುರ ನಗರ ರೈಲು ನಿಲ್ದಾಣದಿಂದ ಹೊರಡುವ, ಗಾಜಿಪುರ ಸಿಟಿ - ಶ್ರೀ ಸಿದ್ಧಾರೂಢ ಸ್ವಾಮೀಜಿ ಹುಬ್ಬಳ್ಳಿ ರೈಲು ನಿಲ್ದಾಣ ಮಧ್ಯದ, ವಾರದ ವಿಶೇಷ ವೇಗದೂತ ರೈಲಿನ ಸೇವೆಯನ್ನು, ಈ ತಿಂಗಳ 30ರ ವರೆಗೆ ವಿಸ್ತರಿಸಲಾಗಿದೆ. ಪ್ರತಿ ಬುಧವಾರ, ಹುಬ್ಬಳ್ಳಿಯಿಂದ ಹೊರಡುವ, ಹುಬ್ಬಳ್ಳಿ–ಮುಜಫರ್‌ಪುರ, ಸಾಪ್ತಾಹಿಕ ವಿಶೇ ’ ರೈಲು ಸಂಚಾರವನ್ನು, ಈ ತಿಂಗಳ 29ರ ವರೆಗೆ, ನೈಋತ್ಯ ರೇಲ್ವೆ ವಿಸ್ತರಿಸಿದೆ.

<><><>

**ಅಗ್ನಿವೀರ ನೇಮಕಾತಿ ಜಾಥಾ,** ಮೈಸೂರು ಜಿಲ್ಲೆ, ನಜರಾಬಾದ್ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ, ಈ ತಿಂಗಳ 19 ರಿಂದ 27ರ ನಡೆಯಲಿದೆ. 6 ಸಾವಿರದ 235 ಅಭ್ಯರ್ಥಿಗಳು ಭಾಗವಹಿಸಲಿದ್ದಾರೆ ಎಂದು, ಬೆಂಗಳೂರಿನ ಭಾರತೀಯ ಸೇನಾ ನೇಮಕಾತಿ ಅಧಿಕಾರಿ, ಕರ್ನಲ್

ವಿವೇಕ ಜಮಾದಾರ ತಿಳಿಸಿದ್ದಾರೆ. ಅಗ್ನಿವೀರ ನೇಮಕಾತಿ ಜಾಥಾದಲ್ಲಿ, 6 ಸಾವಿರದ 43 ಪುರು ಹಾಗೂ 192 ಮಹಿಳಾ ಅಭ್ಯರ್ಥಿಗಳು ಭಾಗವಹಿಸಲಿದ್ದು, ಪ್ರತಿ ದಿನ 800 ಅಭ್ಯರ್ಥಿಗಳಿಗೆ, ವಿವಿಧ ಪರೀಕ್ಷೆ ನಡೆಯಲಿವೆ.

<><><>

**ಕೊಡವ ಕೌಟುಂಬಿಕ ಹಾಕಿ, 26ನೇ ಆವೃತ್ತಿಯ ಪಂದ್ಯಾವಳಿ,** ಚೇನಂಡ ಕುಟುಂಬದ ಸಾರಥ್ಯದಲ್ಲಿ, ಕೊಡವ ಹಾಕಿ ಅಕಾದೆಮಿ ಮೇಲುಸ್ತುವಾರಿಯಲ್ಲಿ, ನಾಪೋಕ್ಲು ಗ್ರಾಮದಲ್ಲಿ, ಒಂದು ತಿಂಗಳು ಆಯೋಜಿತವಾಗಿದೆ. ಹಾಕಿ ವೀಕ್ಷಕ ವಿವರಣೆಗಾರ, ಮಾಳೇಟಿರ ಶ್ರೀನಿವಾಸ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

**ಮೈಸೂರು ಜಿಲ್ಲೆ, ಹುಣಸೂರು ವಿಭಾಗದ,** ಪಿರಿಯಾಪಟ್ಟಣ ವ್ಯಾಪ್ತಿಯ, ಗುಳ್ಳೆದಹಳ್ಳ ಅರಣ್ಯದಿಂದ, 2 ಕಿಲೋ ಮೀಟರ್ ದೂರದಲ್ಲಿರುವ, ಕೊಪ್ಪ ವಲಯದಲ್ಲಿ, ಗುಂಡೇಟಿನಿಂದ ಚಿರತೆ ಸಾವಿಗೀಡಾಗಿರುವ ಬಗ್ಗೆ, ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳುವುದಾಗಿ, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಮುಖ್ಯ ವನ್ಯಜೀವಿ ಪರಿಪಾಲಕರಿಗೆ, ಲಿಖಿತ ಸೂಚನೆ ನೀಡಿರುವ ಸಚಿವರು, ಎರಡು ವ ೯ ವಯಸ್ಸಿನ ಹೆಣ್ಣು ಚಿರತೆಯೊಂದು, ಗುಂಡೇಟಿನಿಂದ ಮೃತಪಟ್ಟಿರುವುದು ಅತ್ಯಂತ ನೋವಿನ ಸಂಗತಿಯಾಗಿದೆ. ವನ್ಯಜೀವಿ ಅಂಗಾಂಗಕ್ಕಾಗಿ ಕಳ್ಳಬೇಟೆ ಇನ್ನೂ ನಡೆಯುತ್ತಿದೆ ಎಂಬುದಕ್ಕೆ, ಈ ಘಟನೆ ಪುಷ್ಟಿ ನೀಡುತ್ತಿದೆ. ಈ ನಿಟ್ಟಿನಲ್ಲಿ ತನಿಖೆ ನಡೆಸುವಂತೆ ಸೂಚಿಸಿದ್ದಾಗಿ, ತಿಳಿಸಿದ್ದಾರೆ. ಮೃತ ಚಿರತೆಯ ಮರಣೋತ್ತರ ಪರೀಕ್ಷೆ ನಡೆಸಿದ, ಡಾಕ್ಟರ್ ಆದರ್ಶ, ಚಿರತೆಯ ದೇಹದೊಳಗೆ, ಮೂರು ಗುಂಡುಗಳು ಪತ್ತೆಯಾಗಿವೆ ಎಂದು ವರದಿ ಮಾಡಿದ್ದಾರೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**ಬಾಗಲಕೋಟೆ ಹಾಗೂ ದಾವಣಗೆರೆ** ಉಪಚುನಾವಣೆ; ಜಿಲ್ಲಾಡಳಿತಗಳಿಂದ ಸ್ವೀಪ್ ಅಭಿಯಾನ.

**ದೇಶದಲ್ಲಿ 70 ದಿನಗಳಿಗೆ ಸಾಕಾಗುವ** ್ಟಿ, ಕಚ್ಚಾ ತೈಲದ ಸಂಗ್ರಹವಿದೆ – ಕೇಂದ್ರ ಸಚಿವ, ಪ್ರಲ್ಹಾದ ಜೋಶಿ, ಮಾಹಿತಿ.

**ಪೆಟ್ರೋಕೆಮಿಕಲ್ ಉತ್ಪನ್ನಗಳು;** ಜೂನ್ 30ರ ವರೆಗೆ, ಕಸ್ಟಮ್ಸ್ ಸುಂಕದ ಪೂರ್ಣ ವಿನಾಯಿತಿಗೆ, ಕೇಂದ್ರ ನಿರ್ಧಾರ.

**‘ಆರೋಗ್ಯಕ್ಕಾಗಿ ಜೊತೆಗೂಡಿ,** ವಿಜ್ಞಾನದ ಜೊತೆ ನಿಲ್ಲಿ’, ಧ್ಯೇಯದೊಂದಿಗೆ, ಇಂದು, ವಿಶ್ವ ಆರೋಗ್ಯ ದಿನಾಚರಣೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>